7. ಹಾಲೀ ಬಾಗಾಯತು ದರ ಮೊಕರರು ಆಗಿರುವ ಅಡಿಕೆ ಮತ್ತು ತೆಂಗಿನ ತೋಟಗಳು ಯಾವ ಕಾರಣದಿಂದಲಾದರೂ ಈ ತಾರೀಖಿನಿಂದ ಹಿಂದೆ 3 ವರ್ಷಗಳ ಲಾಗಾಯತು ಹಿಡುವಳೀ ಕೆಳಗೆ ಬಾರದೇ ಇದ್ದಲ್ಲಿ ಡೆಪ್ಯುಟಿ ಕಮ್ಮಿಷನರವರು ಅಂಥಾ ತೋಟಗಳ ಹಾಲೀ ಸ್ಥಿತಿಯನ್ನು ನೋಡಿ ನ್ಯಾಯವಾಗಿ ಮುನಾಸಬು ತೋರಿದಲ್ಲಿ 1ನೇ ಕಲಮಿನಲ್ಲಿ ನಮೂದಾಗುವ ರಿಯಾಯತೀ ಕಂದಾಯದ ಅವಧಿಯಲ್ಲಿ ಅರ್ಧಕ್ಕೆ ಹೆಚ್ಚಿಲ್ಲದಂತೆ ಹಂಗಾಮಿಯಾಗಿ ರಿಮಿಶಿರ್ಷ ಕೊಡಬಹುದು.

8. ಮೇಲೆ 7ನೇ ಕಲಂಗೆ ಲಗಾವಾಗುವ ಜಮಿರ್ಗಳ ವಿಷಯದಲ್ಲಿ ಆ ಕಲಂನಲ್ಲಿ ನಮೂದಾಗುವದಕ್ಕಿಂತಲೂ ಜಾಸ್ತೀಯಾದ ರಿಯಾಯತೀ ತೋರಿಸತಕ್ಕದ್ದು ಅವಶ್ಯಕವೆಂದು ಡೆಪ್ಯುಟಿ ಕಮ್ಮಿಷನರವರು ಅಭಿಪ್ರಾಯಪಡುವ ಸಂದರ್ಭದಲ್ಲಿ ಅಂಥಾ ವಿಷಯಗಳನ್ನು ಅವರು ಸರ್ವೇ ಸೂಪರಿಟೆಂಡೆಂಟರವರ ಮೂಲಕವಾಗಿ ಗವರ್ನಮೆಂಟಿನವರ ಹುಕ್ಕುಂ ಬಗ್ಗೆ ಸ್ಪೆಷಲ್ ಆಗಿ ರಿಪೋರ್ಟು ಮಾಡತಕ್ಕದ್ದು.

9. 1ನೇ ಕಲಂನಲ್ಲಿ ನಮೂದಾಗಿರುವಂತೆ ಬಾಗಾಯತು ದರವನ್ನ ತಿಳಿದುಕೊಳ್ಳುವದು ಸಾವಕಾಶವಾಗುವ ಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಕೌಲ್ ದರಖಾಸ್ತನ್ನು ನುಂಜೂರು ಮಾಡಿ ನಂತರ ಮೊಕರರ್ ಆಗಬೇಕಾದ ಬಾಗಾಯತು ದರವನ್ನು ವ್ಯವಸ್ಥೇ ಮಾಡತಕ್ಕದ್ದು. ಇಂಥಾ ಸಂದರ್ಭದಲ್ಲಿ ಸಾಧ್ಯವಾದಷ್ಟು ಜಾಗ್ರತೆಯಾಗಿ ಬಾಗಾಯತು ದರವನ್ನು ನಂತರ ಮೊಕರರ್ ಮಾಡಿ ಮೊದಲು ಕೊಟ್ಟ ಕೌಲಿಗೆ ಬದಲಾಗಿ ಹೊಸ ಕೌಲ್ ತಯಾರುಮಾಡಿಸಿ ಅದರಲ್ಲಿ ಸದರೀ ದರವನ್ನು ನಮೂದಿಸತಕ್ಕದ್ದು.

10. ಮಲನಾಡು ತಾಲ್ಲೂಕುಗಳಲ್ಲಿ ತರಂ ದಾಖಲಾಗದೇ ಇರುವ ಸರಕಾರೀ ಬಂಜರು ಜಮೀನುಗಳನ್ನು ತತ್ಕಾಲದಲ್ಲಿ ಜಾರೀಲಿರುವ ಸ್ಪೆಷಲ್ ಬಾಗಾಯತು ದರಕ್ಕೆ ಬಳಪಡುವ ಷರತ್ತಿನ ಮೇಲೆ ವಿಸಹಾ ಹೊಸದಾಗಿ ತರಂ ಮೊಕರರು ಮಾಡಿ ಸಾಗುವಳೀಬಗ್ಗೆ ಕೊಡಕೂಡದು.

ಬಮೋಜೇಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟೇರಿ.

ಮೈಸೂರು ದಿವಾನರವರ ಪ್ರೊಸಿಡಿಂಗ್ಸ್ ರೆವಿನ್ಯೂ ಇಲಾಖಾ.

ಆರ್ಡರ್ ನಂಬರ್ 3786—95—101 ಮುಕ್ಕುಂ 1ನೇ ಸೆಪ್ಟಂಬರ್ 1887ನೇ ಇಸವಿ ಮೊಕ್ಕಾಂ ಬೆಂಗಳೂರು.

1887ನೇ ಇಸವಿ ಫಿಬ್ರವರೀ 11ನೇ ಮುಕ್ಕುಂ 341ನೇ ನಂಬರು ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿ ಆದ ಪ್ರಕಾರ ಸರ್ವೇ ಗ್ಯಾರಂಟಿಯಾನೆ ಸರ್ವೆ ಕಾಲಿನ XVIIನೇ ನಿಬಂಧನೆ ಅನುಸರಿಸಿ ಇನಾಂ ಗ್ರಾಮಗಳಲ್ಲಿರತಕ್ಕ ತರೀ ಜಮಿರ್ಗಳ ಸರ್ವೆ ಆಕಾರದ $\frac{1}{17}$ರ ಭಾಗವು "ಇರಿಗೇರ್ಷನ್‌ಸೆಸ್‌ಗೆ ಸಮನಾದ ಮೊಬಲಗು" ಯೆಂಬ ಹೆಸರಿಂದ ವಸೂಲ್ಮಾಡಲ್ಪಡತ್ತಿದೆ. ಇನಾಂದಾರರು ಸಾಧಾರಣವಾಗಿ ಈ ವಸೂಲಾತಿ ವಿಷಯದಲ್ಲಿ ಫಿರ್ಯಾದು ಮಾಡುವದಲ್ಲದೆ ಸದರೀ ಜಮೀನುಗಳಿಗೆ ಯಾವದೊಂದು ಸರ್ಕಾರಿ ಜಲಾಧಾರಗಳಿಂದಲೂ ಫಾಯಿದೆ ಇಲ್ಲವಾದದರಿಂದ ಈ ಬಾಬತು ಮೊಬಲಗು ವಸೂಲ್ ಮಾಡುವದು ಅನ್ಯಾಯವೆಂಬದಾಗಿ ವಾದಿಸುತ್ತಾರೆ. ಈ ಬಾಬತು ಫಿರ್ಯಾದು ಇನಾಂ ಕೆರೆಗಳಿಂದ ಮಾತ್ರವೇ ನೀರು ಹಾಯುವಂಥಾ ಇನಾಂ ತರೀ ಜಮಿರ್ಗಳುಳ್ಳ ಪೂರಾ ಗ್ರಾಮದ ಇನಾಂದಾರರುಗಳ ವಿಷಯದಲ್ಲಿ ನ್ಯಾಯವಾದುದೆಂಬದಾಗಿ ಶ್ರೀಮ್ ಮಹಾರಾಜಾ ಸರ್ಕಾರದವರು ಅಭಿಪ್ರಾಯ ಪಡುತ್ತಾರೆ. ಸರ್ಕಾರದವರು ಈ ಬಾಬತು ವಸೂಲಿಯನ್ನು ಮೋಕೂಫ್ ಮಾಡತಕ್ಕದ್ದೆಂದು ಆಜ್ಞಾಪಿಸುತ್ತಾರೆ. ಆದರೆ ಈ ನಡವಳಿಕೆಯನ್ನು ಮುಂಜಾಗ್ರತೆಯಾಡುವದರಲ್ಲಿ ಗವರ್ನಮೆಂಟಿನವರು ಸದರೀ ನಡವಳಿಕೆಯಿಂದ ಫಾಯಿದೆ ಪಡಿಯುವ ತಮಾಂ ಇನಾಂದಾರರಿಗೂ ತಿಳಿಸುವದೇನೆಂದರೆ ಸದರೀ ಇನಾಂದಾರರು ಅವರ ಕೆರೆಗಳಿಗೆ ಅವಶ್ಯಕವಾದಾಗ ರಿಪೇರಿ ಕೆಲಸಗಳನ್ನು ನಡಿಸುವದಕ್ಕೂ ಮತ್ತು ಅಪ್ಪುಗಳನ್ನು ಯಾವಾಗಲೂ ಕ್ರಮವಾದ ಸ್ಥಿತಿಯಲ್ಲಿಟ್ಟುಕೊಂಡಿರುವದಕ್ಕೂ ಖಂಡಿತವಾಗಿ ಜವಾಬ್ದಾರರಾಗಿರತಕ್ಕದ್ದು. ಅವರು ಈ ಕೆಲಸದಲ್ಲಿ ತಪ್ಪಿದರೆ ಅವಶ್ಯಕವಾದ ಕಾಮಗಾರಿಯು ಸರ್ಕಾರದಿಂದ ನಡಿಸಲ್ಪಟ್ಟು ಲಾಗವಡು ಇನಾಂದಾರರಿಂದ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

2. ಮೇಲ್ಕಂಡ ಹುಕ್ಕುಂ ಅನುಸರಿಸಿ ಇದರಡೀಕಂಡ ಸೆಕ್ಷರ್ಣಗಳು ಸರ್ವೆಕಾಲಿನ XVII ಮತ್ತು XVIIIನೇ ಸೆಕ್ಷನಿಗೆ ಬದಲಾಗಿ ಉಪಯೋಗಿಸಲ್ಪಡತಕ್ಕದ್ದು.

XVII. ಯಿರಿಗೇರ್ಷ ಸೆಸ್ಸ್‌ಯಾನೆ ನೀರು ಸರದಿಯು ಸರ್ಕಾರ ಗ್ರಾಮದಲ್ಲಿಯಾಗಲಿ ಪೂರಾ ಇನಾಂ ಗ್ರಾಮದಲ್ಲಿಯಾಗಲ್ಲಿ ಇನಾಂ ತರೀಕ್ ಯಿರತಕ್ಕ ತಮಾಂ ತರೀ ಜಮಿರ್ಗಳ ಏಯಿಂದ ತರಾವ್ ಆಗತಕ್ಕ ಸರ್ವೆ ಆಕಾರದಲ್ಲಿ ಬದಸ್ತೂರು ಕೀರಿಸಲ್ಪಡತಕ್ಕದ್ದು. ಮತ್ತು ಅಂಥಾ ಆಕಾರದ $\frac{1}{17}$ರ ಭಾಗವು ಬದಸ್ತೂರು ಜೋಡೀಮೇಲ್ಕೆ ಪರಂತು "ಯಿರಿಗೇರ್ಷ ಸೆಸ್ಸ್‌ಗೆ

ಸಮನಾದ ಮೊಬಲಗು" ಯಂಬ ಹೆಸರಿನಿಂದ ಮತ್ತು ಅಂಥಾ ಜಮೀನ್ ಯಾ ಗ್ರಾಮಗಳ ಮೇಲೆ ಅಲಾಹಿದಾ ವಸೂಲ್ ಮಾಡಲ್ಪಡಬೇಕಾದ ಕ್ವಿಟ್‌ರೆಂಟ್ ದೇಖೀಲ್ ವಸೂಲ್‌ಮಾಡಲ್ಪಡತಕ್ಕ ಸ್ಥಲ್ಲದೆ "ಡಿಸ್ಟ್ರಿಕ್ಟ್‌ಯಿರಿಗೇರ್ಷ ಫಂಡ್"ಹೆಡ್ಡಿಗೆ ಲೆಕ್ಕದಲ್ಲಿ ಜಮಾ ಕಟ್ಟಲ್ಪಡತಕ್ಕದ್ದು; ಪರಂತು ಅಂಥಾ ತರೀ ಜಮೀನುಗಳು ಪೂರಾ ಇನಾಂ ಗ್ರಾಮಗಳಲ್ಲಿ ಯಿದ್ದು ಅಂಥಾ ಗ್ರಾಮದಲ್ಲೇ ಯಿರತಕ್ಕಂಥಾ ಕೆರೇ ಯಾ ಇತರ ಜಲಾಧಾರಗಳಿಂದ ಮಾತ್ರವೇ ನೀರು ವದಗಿಸಲ್ಪಟ್ಟರೆ ಅವುಗಳಿಗಾಗಿ ಯಾವ ನೀರು ಸರದಿಯಾಗಲಿ ಯಾ ಅದಕ್ಕೆ ಸಮಾನ ಮೊಬಲಗಾಗಲೀ ಸರ್ಕಾರಕ್ಕೆ ತೆರಬೇಕಾದ್ದಿಲ್ಲವು.

ಪರಂತು ಯಿರಿಗೇರ್ಷ ಸೆಸ್ಸ್‌ಯಾನೆ ನೀರು ಸರದಿಯನ್ನು ಕರಾರ್ ಮಾಡುವದಕ್ಕೋಸ್ಕರ ಸರ್ವೇ ಇಲಾಖೇಯವರು, ಸರ್ಕಾರ ಜಲಾಧಾರಗಳಿಂದ ನೀರು ಹಾಯಿಸುವಂಥಾ ಇನಾಂ ಗ್ರಾಮಗಳಲ್ಲಿರತಕ್ಕ ಅಂಥಾ ತರೀ ಜಮೀನುಗಳ ಆಕಾರವನ್ನು ತಿಳಿದು ರೆಕಾರ್ಡು ಮಾಡತಕ್ಕದ್ದು, ಮತ್ತು ತಮಾಂ ಇನಾಂ ಯಾ ಇತರ ತರೀ ಜಮೀನುಗಳ ಸರ್ವೇ ಆಕಾರದಲ್ಲಿ ಅವುಗಳ ಮೇಲೆ ಕರಾರ್ ಮಾಡಲ್ಪಡಬಹುದಾದ ಯಾವದಾರೂ ಅಲಾಹಿದಾ ನೀರು ಸರದಿಯೂ ಅಜಗಿ ಯಿರತಕ್ಕದ್ದು.

XVIII. ಕಾಯಂಗುತ್ತಾ ಗ್ರಾಮಗಳಿಗೂ ಮತ್ತು (ಸರ್ವಮಾನ್ಯ ಯಾ ಜೋಡೀ) ಇನಾಂ ಗ್ರಾಮಗಳಿಗೂ ರೂಪಾಯಿ ವಂದಕ್ಕೆ ವಂದಾಣಿಯಂತೆ ಲೋಕಲ್ ಫಂಡ್ ಸೆಸ್ ವಸೂಲ್ಮಾಡಲ್ಪಡತಕ್ಕದ್ದು. ಕಾಯಂಗುತ್ತಾ ಗ್ರಾಮದ ವಿಷಯದಲ್ಲಿ ಕಾಯಂಗುತ್ತಾ ಮೊಬಲಗಿನ ಮೇಲೂ ಇನಾಂ ಗ್ರಾಮಗಳ ವಿಷಯದಲ್ಲಿ ಇನಾಂ ಗ್ರಾಮಗಳ ಆಕಾರದಮೇಲೂ ವಸೂಲ್ ಮಾಡಲ್ಪಡತಕ್ಕದ್ದು.

3. ಬದಸ್ತೂರು 1875ನೇ ಇಸವಿ ಮೇ 7ನೇ ಮಕ್ಕಂ 72ನೇ ನಂಬರುಳ್ಳ ಮೈಜೀ ಚೀಫ್ ಕಮ್ಮಿಷನರವರ ಇಸ್ತಿಹಾರಿನೊಂದಿಗೆ ಫಾಯಿಷ್ ಮಾಡಲ್ಪಟ್ಟ ಡಿಸ್ಟ್ರಿಕ್ಟ್ ಯಿರಿಗೇರ್ಷ ಸೆಸ್ಸ್ ಫಂಡಿನ ಆಡಳಿತವನ್ನು ನಡಿಸುವದರಲ್ಲಿ ಡಿಸ್ಟ್ರಿಕ್ಟ್ ಕಮ್ಮಿಟಿಗಳವರು ಅನುಸರಿಸತಕ್ಕ ಬಗ್ಗೆ ಏರ್ಪಡಿಸಿದ ನಿಬಂಧನೆಗಳ 6ನೇ ಕಲಮು ಈ ಕೆಳಗೆ ನಮೂದಾಗುವ ಮೇರಿಗೆ ತಿದ್ದುಪಾಡಾಗಿರತಕ್ಕದ್ದು.

VI. ಇನಾಂ ವ ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರು ತಮ್ಮ ತಮ್ಮ ಗ್ರಾಮದ ಕೆರೆಯ ನೀರಿನಿಂದಲೇ ಸಾಗುವಳೀ ಆಗುವ ತರೀ ಜಮೀನಿಗಾಗಿ ನೀರು ಸರದಿಯನ್ನ ತೆರಬೇಕಾದ ಅವ್ಯಾಕತೆ ತಪ್ಪಿರುತ್ತದೆಯಾಗಿ ಅಂತಾ ಕೆರೆಗಳಿಗೆ ಕಾಲ ಕಾಲಕ್ಕೆ ರಿಪೇರಿ ಮಾಡುವಂತಾ ವ ಅವುಗಳನ್ನ ಪೊಳ್ಳೇ ದುರಸ್ತು ಸ್ಥಿತಿಯಲ್ಲಿ ಯಿಟ್ಟುಕೊಳ್ಳುವಂತಾ ಜವಾಬ್ದಾರಿಯನ್ನ ಖಂಡಿತವಾಗಿ ಜಾರಿಯಲ್ಲಿ ತರಲ್ಪಡತಕ್ಕದ್ದು. ಪೊಂದು ವೇಳೆ ಅವರುಗಳು ತಮ್ಮ ತಮ್ಮ ಕೆರೆಗಳನ್ನ ಪೊಳ್ಳೇ ಸ್ಥಿತಿಯಲ್ಲಿ ಯಿಟ್ಟುಕೊಳ್ಳುವದಕ್ಕಾಗಲಿ ಆವಶ್ಯಕವಾದ ಕಾಮುಗಾರಿಗಳನ್ನ ಸಕಾಲದಲ್ಲಿ ಸಾಧ್ಯವಾದ ತ್ವರ್ಯದಿಂದಲೂ ವ ಬಂದೋಬಸ್ತಾಗಿಯೂ ನಡಿಸಲಿಕ್ಕಾಗಲಿ ತಪ್ಪಿದರೆ, ಅಂತಾ ಕಾಮುಗಾರೀ ವಗೈರೇ ಕೆಲಸವನ್ನ ಗವರ್ಮೆಂಟಿನವರೇ ತೆಗದುಕೊಂಡು ಖುದ್ದ ನಡಿಸಲು ನ್ಯಾಯ್ಯವಾಗಿರತಕ್ಕದ್ದು. ಆ ಬಾಬತು ಲಾಗವಡು ಕಂದಾಯದ ಬಾಕೀಯಂತೆಯೇ ಅವರುಗಳಿಂದ ವಸೂಲ್ ಮಾಡಲ್ಪಡತಕ್ಕದ್ದು.

4. ಈ ತಿದ್ದುಪಾಟುಗಳು ಸರ್ವರ ತಿಳುವೆಗೆ ಬಗ್ಗೆ ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಡತಕ್ಕದ್ದು.

5. ಇನಾಂ ಗ್ರಾಮಗಳಲ್ಲಿರುವ ತರೀ ಜಮೀನ್ ಮೇಲೆ ವಸೂಲಾಗುವ ನೀರು ಸರದಿಯನ್ನ ನಿಲ್ಲಿಸಿ ಯಿಡತಕ್ಕ ಬಗ್ಗೆ, 1881ನೇ ಇಸವಿ ಡಿಸೆಂಬರ್ 17ನೇ ಮಕ್ಕಂ 7416—225ನೇ ನಂಬರ್‌ಪುಳ್ಳ ಪ್ರೊಸಿಡಿಂಗ್ಸ್‌ನಲ್ಲಿ ಕಂಡ ಮಕ್ಕಂ ಯಿದರ ದೆಸೆಯಿಂದ ರದ್ದು ಪಡಿಸಿರುತ್ತೆ. ಸರ್ಕಾರದ ಜಲಾಧಾರ ವಿಲ್ಲದೇ ಯಿರುವ ತರೀ ಇನಾಂತಿ ಜಮೀನ್‌ಗಳ ಬಾಬತು ಬರಬೇಕ್ಕ ಬಾಕೀಯಂತೆ ಲೆಕ್ಕದಲ್ಲಿ ನಮೂದಾಗಿರುವ್ಯೆವ್ಯೊಬ್ಬಲಗು, ಈಗ ಮ್ಯುಂಜೂರ್ಮಾಡಿರುವ ರೂಲ್ಸ್ ಅನುಸರಿಸಿ ವಜಾ ಮಾಡಲ್ಪಡತಕ್ಕದ್ದು, ಹಾಗೆ ವಜಾ ಮಾಡಲ್ಪಟ್ಟ ಮೊಬಲಗುಗಳ್ನು ಈ ಲೆಕ್ಕೀಗೆ ತ್ವರ್ಯವಾಗಿ ತಿಳಿಯಲ್ಪಡಿಸತಕ್ಕದ್ದು. ಈ ಬಾಬಿನಲ್ಲಿ ಮಿಕ್ಕಾದ ಸಂಗತಿಯೊಳಗೆ ಯಿರುವ ಬಾಕೀಗಳನ್ನ ವಸೂಲ್ ಮಾಡಲಿಕ್ಕೆ ಕೂಡ್ಲೆ ತರದೂದು ನಡಿಸಲ್ಪಡತಕ್ಕದ್ದು.

6. ಸದರೀ ಪರಿಷ್ಕರಿಸಲ್ಪಟ್ಟ ಸರ್ವೇ ಕೌಲಿನ 18ನೇ ಕಲಮನುಸರಿಸಿ ಯಿರಿಗೇರ್ಷ ಸೆಸ್ಸ್ ಯಾ ಅದರ ಸಮಾನ ಮೊಬಲಗನ್ನ ವಸೂಲ್ ಮಾಡುವದರಲ್ಲಿ ಯಾವ ಇನಾಂತಿ ತರೀ ಜಮೀನುಗಳನ್ನ ವಿನಾಯಿಸತಕ್ಕದ್ದೋ ಆ ವಿಷಯದಲ್ಲಿ ಡೆಪ್ಯುಟಿ ಕಮ್ಮಿಷನರುಗಳು ರೆವಿನ್ಯೂ ಸರ್ವೇ ಸೂಪರಿಂಟೆಂಡೆಂಟರಿಗೆ ಬರದು ವ್ಯವಸ್ಥೇ ಮಾಡಬೇಕೆಂದು ಅಪೇಕ್ಷಿಸಲ್ಪಟ್ಟಿರುತ್ತಾರೆ.

ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟೇರಿ.